ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು: ದಿನಾಂಕಃ 7–1–2015

**ಮುಂದುವರೆದ ಮುಖ್ಯ ವಿಚಾರಣೆಃ ಪರ ಶ್ರೀ.ಎಂ.ಜಿ. ವಕೀಲರಿಂದಃ**

ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರವನ್ನು ಹಾಜರುಪಡಿಸಿದ್ದು ಅದರಲ್ಲಿರುವ ವಿಷಯವೆಲ್ಲಾ ಸತ್ಯವಾಗಿದ್ದು ಅದನ್ನು ನಾನೇ ಹೇಳಿ ಬರೆಯಿಸಿ ನನ್ನ ಸಹಿ ಮಾಡಿರುತ್ತೇನೆ. ಓ.ಎಸ್.399/2012ರ ಅಂತಿಮ ಡಿಕ್ರಿಯ ದೃಢೀಕೃತ ನಕಲನ್ನು ಹಾಜರುಮಾಡಿದ್ದೇನೆ. ಇದನ್ನು ನಿಪಿ3 ಎಂದು ಗುರುತಿಸಲಾಯಿತು. ಇದರಲ್ಲಿ ಕೆ.ಟಿ.ಸುರೇಶ್‌ರವರ ಭಾಗಕ್ಕೆ ಅಂತಿಮ ಡಿಕ್ರಿಯನ್ನು ಬರೆಯಲಾಗಿದೆ.

ಓ.ಎಸ್.399/2012ರ ಅಂತಿಮ ಡಿಕ್ರಿಯಲ್ಲಿ ಬರೆದ ಮತ್ತೊಂದು ದೃಢೀಕೃತ ನಕಲನ್ನು ಹಾಜರುಮಾಡುತ್ತಿದ್ದು ಇದನ್ನು ನಿಪಿ4 ಎಂದು ಗುರುತಿಸಲಾಯಿತು. ಇದರಲ್ಲಿ ಜಯಲಕ್ಷ್ಮಮ್ಮ ಇವರ ಭಾಗಕ್ಕೆ ಅಂತಿಮ ಡಿಕ್ರಿಯನ್ನು ಬರೆಯಲಾಗಿದೆ.

ಓ.ಎಸ್.399/2012ರ ಅಂತಿಮ ಡಿಕ್ರಿಯಲ್ಲಿ ಬರೆದ ಮತ್ತೊಂದು ದೃಢೀಕೃತ ನಕಲನ್ನು ಹಾಜರುಮಾಡುತ್ತಿದ್ದು ಇದನ್ನು ನಿಪಿ5 ಎಂದು ಗುರುತಿಸಲಾಯಿತು. ಇದರಲ್ಲಿ ವೆಂಕಟೇಶ್ ಅಂದರೆ ನನ್ನ ಭಾಗಕ್ಕೆ ಅಂತಿಮ ಡಿಕ್ರಿಯನ್ನು ಬರೆಯಲಾಗಿದೆ.

ಓ.ಎಸ್.399/2012ರ ಅಂತಿಮ ಡಿಕ್ರಿಯಲ್ಲಿ ಬರೆದ ಮತ್ತೊಂದು ದೃಢೀಕೃತ ನಕಲನ್ನು ಹಾಜರುಮಾಡುತ್ತಿದ್ದು ಇದನ್ನು ನಿಪಿ6 ಎಂದು ಗುರುತಿಸಲಾಯಿತು. ಇದರಲ್ಲಿ ಭಾಗ್ಯ ಇವರ ಭಾಗಕ್ಕೆ ಅಂತಿಮ ಡಿಕ್ರಿಯನ್ನು ಬರೆಯಲಾಗಿದೆ.

ಒಂದು ಆರ್‌ಟಿಸಿಯನ್ನು ಹಾಜರುಮಾಡಿದ್ದು ಅದನ್ನು ನಿಪಿ 7 ಎಂದು ಗುರುತಿಸಲಾಯಿತು.

ಆದ್ದರಿಂದ ಅರ್ಜಿಯಲ್ಲಿ ಕೋರಿದಂತೆ ಆದೇಶ ಮಾಡಲು ಕೋರಿಕೊಳ್ಳುತ್ತೇನೆ.

**ಪಾಟಿಸವಾಲು ಶ್ರೀ ಡಿ.ಎಸ್. ವಕೀಲರಿಂದಃ**

ನನ್ನ ವಕೀಲರ ಹೆಸರು ಗೊತ್ತಿಲ್ಲ. ನಾನುಕುಪ್ಪೆ ಗ್ರಾಮದಲ್ಲಿ ವಾಸವಾಗಿದ್ದೇನೆ. ನನ್ನ ತಮ್ಮ ಶ್ರೀನಿವಾಸ ಸುಮಾರು 6–7 ವರ್ಷಗಳ ಹಿಂದೆ ಮದುವೆ ಮಾಡಿಕೊಂಡಿದ್ದು, ಅಂದಿನಿಂದ ಬೆಂಗಳೂರಿನಲ್ಲಿ ವಾಸವಾಗಿದ್ದಾರೆ. ಕುಪ್ಪೆ ಗ್ರಾಮಕ್ಕೆ ಬಂದು ಹೋಗಿ ಮಾಡುತ್ತಾರೆ. ನಮ್ಮ ತಂದೆಯವರಿಗೆ ಕುಡಿತದ ಚಟ ಇತ್ತು, ಇದು ಬಿಟ್ಟು ಬೇರೆ ಯಾವುದೇ ಚಟಗಳಿಲ್ಲ, ನಮ್ಮ ತಂದೆ ನಮ್ಮ ಗ್ರಾಮದಲ್ಲಿಯೇ ಬೇರೆ ಮನೆಯಲ್ಲಿರುತ್ತಾರೆ. ನಮ್ಮ ಮನೆಯಿಂದ ಕೂಗಳತೆ ದೂರದ ಮನೆಯಲ್ಲಿರುತ್ತಾರೆ. ನಮ್ಮ ತಂದೆ ವಾಸವಾಗಿರುವ ಮನೆ ನಮ್ಮ ತಾತನ ಹೆಸರಿನಲ್ಲಿರುತ್ತದೆ. ಇನ್ನೂ ವಿಭಾಗವಾಗಿಲ್ಲ. ಈ ಮನೆಯನ್ನು ಹೊರತುಪಡಿಸಿ ಉಳಿದ ಜಮೀನನ್ನು ನಾವು ವಿಭಾಗ ಮಾಡಿಕೊಂಡಿದ್ದೇವೆ. ನಾನು ವಾಸವಾಗಿರುವ ಮನೆ ಕೂಡ ನಮ್ಮ ತಂದೆಯ ಹೆಸರಿನಲ್ಲಿರುತ್ತದೆ. ಈ ಮನೆಯಲ್ಲಿ ನಾನು ನನ್ನ ಹೆಂಡತಿ ಮತ್ತು ನನ್ನ ಮಕ್ಕಳು ಮಾತ್ರ ವಾಸವಾಗಿದ್ದೇವೆ. ನನ್ನ ಸಹೋದರರಿಗೆ ಯಾರಿಗೂ ಮನೆಯನ್ನು ಭಾಗದಲ್ಲಿ ಕೊಟ್ಟಿಲ್ಲ, ನಿಪಿ 3 ರಿಂದ6ರಲ್ಲಿ ಆದಂತಹ ವಿಭಾಗದಲ್ಲಿ ನಾನಿರುವ ಮನೆಯನ್ನು ಸೇರಿಸಿಲ್ಲ. ನಿಪಿ3 ರಿಂದ 6ರಲ್ಲಿರುವ ವಿಭಾಗದಲ್ಲಿ ಯಾವ ಯಾವ ಸ್ವತ್ತು ಯಾರ ಯಾರ ಭಾಗಕ್ಕೆ ಹೋಗಿದೆ ಎಂದು ಹೇಳಲಾಗುವುದಿಲ್ಲ. ನಿಪಿ3 ರಿಂದ 6 ಅನ್ನು ನಮ್ಮ ತಂದೆ ನನಗೆ ತಂದುಕೊಟ್ಟರು. ಸುಮಾರು 6 ತಿಂಗಳ ಹಿಂದೆ ಇವುಗಳನ್ನು ನಮ್ಮ ತಂದೆ ನನಗೆ ತಂದುಕೊಟ್ಟರು. ನಮ್ಮ ತಂದೆಗೆ ನನ್ನ ಹಾಗೆ ಕೋರ್ಟಿಗೆ ಬಂದು ಸಾಕ್ಷ್ಯವನ್ನು ಕೊಡಲು ತೊಂದರೆ ಇಲ್ಲ.

**ಪಾಟಿ ಸವಾಲನ್ನು ಮಧ್ಯಾಹ್ನಕ್ಕೆ ಮುಂದೂಡಲಾಗಿದೆ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಕುಣಿಗಲ್